

ಒಪೆರಾ ಹೌಸ್‌ನ ಮಾದರಿ

## ಪ್ರತಿ ಮನೆಯಲ್ಲೂ ಒಪೆರಾ ಹೌಸ್

ಒಪೆರಾ ಹೌಸ್ – ಸಿಡ್ನಿಯ ಅನನ್ಯತೆಯ ಸಂಕೇತ. ಬೆಡಗಿನ ಪುಟ್ಟ ಸ್ಮರಣಿಕೆಗಳು, ಆಲಂಕಾರಿಕ ವಸ್ತುಗಳು, ಕಲಾಕೃತಿಗಳು, ಡಿಸೈನರ್ ಆಕ್ಸೆಸರಿಗಳಾಗಿ ಒಪೆರಾ ಹೌಸ್ ಪ್ರತಿಕೃತಿಗಳು ಮೈದಾಳಿವೆ. ಛಾಯಾಚಿತ್ರ, ಇಲ್ಲಸ್ಟ್ರೇಷನ್, ಡಿಜಿಟಲ್ ನಿರೂಪಣೆಗಳಾಗಿಯೂ ವ್ಯಾಪಕ ಸ್ವರೂಪಗಳಲ್ಲಿ ಮನೆಗಳು, ಕಚೇರಿಗಳು ಅಥವಾ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಪ್ರವೇಶ ಪಡೆದುಕೊಂಡಿವೆ. 'ಪ್ರತಿ ಮನೆಯಲ್ಲೂ ಒಪೆರಾ ಹೌಸ್' ಶೀರ್ಷಿಕೆಯಡಿ ಒಂದು ಇಡೀ ಹಾಲ್ ತುಂಬಾ ಇಂತಹ ಪ್ರತಿಕೃತಿಗಳನ್ನೇ ಪ್ರದರ್ಶಿಸಿರುವುದು 'ಸಿಡ್ನಿಸೈಡರ್ಸ್' (ಸಿಡ್ನಿ ನಿವಾಸಿಗಳು) ಮನದಾಳಗಳಿಗೆ ಈ ಒಪೆರಾ ಹೌಸ್ ಇಳಿದಿರುವ ಸಂಕೇತದಂತಿತ್ತು.

ಕಟ್ಟಡದ ಬಿಳಿ ಷೆಲ್ (ಚಿಪ್ಪು) ಛಾವಣಿಗಳಿಗೆ 'ಕಾಂಕ್ರೀಟ್ ಒಂಟೆ', 'ಮೈಥುನನಿರತ ಆಮೆ', 'ಬೆನ್ನೆಲಾಂಗ್ ಪಾಯಿಂಟ್‌ನ ಗೂನು ಬೆನ್ನು' ಎಂಬ ಅಡ್ಡಹೆಸರುಗಳನ್ನು ಪತ್ರಿಕೆಗಳಲ್ಲಿ ನೀಡಲಾಗಿತ್ತು.

ಹೊಸ ರಾಷ್ಟ್ರೀಯ ಒಪೆರಾ ಹೌಸ್ ನಿರ್ಮಾಣದ ಜಾಗವೆಂದು 1955ರಲ್ಲಿ ಬೆನ್ನೆಲಾಂಗ್ ಪಾಯಿಂಟ್ ಅನ್ನು ಘೋಷಿಸಲಾಯಿತು. 1956ರಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಅಂತರರಾಷ್ಟ್ರೀಯ ವಿನ್ಯಾಸ ಸ್ಪರ್ಧೆ ಏರ್ಪಡಿಸಲಾಗಿತ್ತು. ಆಲಂಕಾರಿಕ ಚಿಪ್ಪುಗಳನ್ನೊಳಗೊಂಡ ವಿನ್ಯಾಸಕ್ಕಾಗಿ ಡೇನಿಷ್ ವಾಸ್ತುಶಿಲ್ಪಿ ಜಾರ್ನ್ ಉಟ್ಜಾನ್ ಅವರು ಈ ಕಟ್ಟಡ ನಿರ್ಮಾಣ ಒಪ್ಪಂದವನ್ನು ಗೆದ್ದುಕೊಂಡಿದ್ದರು. ನಿರ್ಮಾಣ ಕಾರ್ಯ ಆರಂಭವಾದದ್ದು 1959ರಲ್ಲಿ. 14 ವರ್ಷಗಳ ಕಾಲ 10,000ಕ್ಕೂ ಹೆಚ್ಚು ಜನರು ಈ ಜಾಗದಲ್ಲಿ ದುಡಿದಿದ್ದಾರೆ. ಇವರಲ್ಲಿ ಅನೇಕರು ಆಗಷ್ಟೇ ಯೂರೋಪ್‌ನಿಂದ ಆಸ್ಟ್ರೇಲಿಯಾಗೆ ವಲಸಿಗರಾಗಿ ಬಂದಿದ್ದಂತಹವರು.

1966ರಲ್ಲಿ ಸರ್ಕಾರದ ಅಧಿಕಾರಿಗಳೊಂದಿಗೆ ಹಲವು ವಿವಾದಗಳಿಂದಾಗಿ ಈ ಯೋಜನೆಯಿಂದ ಉಟ್ಜಾನ್ ಹೊರನಡೆದರು. ಅವರು ಕೆಲಸ ಬಿಟ್ಟ ವಿಚಾರದ ಬಗ್ಗೆ ಈಗಲೂ ವ್ಯಕ್ತವಾಗುವ ಭಿನ್ನ ಭಿನ್ನ ಅಭಿಪ್ರಾಯಗಳು, ಭಾವನೆಗಳ ಉತ್ಕಾಂತಿಯನ್ನೇ ಎಬ್ಬಿಸುತ್ತವೆ ಎಂಬುದು ನಾನು ಸಿಡ್ನಿಯ ಲೈಬ್ರರಿಯೊಂದರಲ್ಲಿ ತಿರುವು ಹಾಕಿದ ಅನೇಕ ಪುಸ್ತಕಗಳಲ್ಲಿ ವ್ಯಕ್ತವಾಗಿದ್ದ ಅಂಶ. ವೆಚ್ಚವನ್ನು ನಿಯಂತ್ರಿಸಿ ಯೋಜನೆ ಅನುಷ್ಠಾನವನ್ನು ತ್ವರಿತಗೊಳಿಸಲು ರಾಜಕಾರಣಿಗಳು ಯತ್ನಿಸಿದ್ದರು. 1966ರಲ್ಲಿ ಒತ್ತಡ ಎಷ್ಟರ ಮಟ್ಟಿಗೆ ಹೆಚ್ಚಾಯಿತೆಂದರೆ, ನ್ಯೂ ಸೌತ್ ವೇಲ್ಸ್ ಸರ್ಕಾರದ ಆಗಿನ ಲೋಕೋಪಯೋಗಿ ಸಚಿವ ಡೇವಿಸ್ ಹ್ಯೂಗ್ಸ್‌ಗೆ ಉಟ್ಜಾನ್ ಅವರು 'ಕೆಲಸ ಬಿಡುವಂತೆ ನೀವು ನನಗೆ ಒತ್ತಡ ಹಾಕಿದ್ದೀರಿ' (you have forced me to leave the job) ಎಂದು ಪತ್ರ ಬರೆದಿದ್ದರು. ಇದನ್ನು ಉಟ್ಜಾನ್‌ರ ರಾಜೀನಾಮೆ ಎಂದು ಭಾವಿಸಿ ತಕ್ಷಣವೇ ರಾಜೀನಾಮೆಯನ್ನು ಹ್ಯೂಗ್ಸ್ ಅಂಗೀಕರಿಸಿಬಿಟ್ಟರು. ಆ ನಂತರ,

## ಲಾಟರಿ ಟಿಕೆಟ್

ಒಪೆರಾ ಹೌಸ್ ಎಂದರೆ ಅನೇಕ ಆಸ್ಟ್ರೇಲಿಯನ್ನರಿಗೆ ಸಂಗೀತ ಅಥವಾ ನಾಟಕ ಮಾತ್ರ ನೆನಪಾಗುವುದಿಲ್ಲ. ಲಾಟರಿ ಟಿಕೆಟ್ ಖರೀದಿ ನೆನಪಾಗುತ್ತದೆ. ಒಪೆರಾ ಹೌಸ್ ಕಟ್ಟಡ ನಿರ್ಮಾಣಕ್ಕಾಗಿ 'ಒಪೆರಾ ಹೌಸ್ ಲಾಟರಿ' ಯೋಜನೆ ಆರಂಭಿಸಲಾಗಿತ್ತು. 1957ರ ನವೆಂಬರ್ 25ರಂದು ಲಾಟರಿ ಟಿಕೆಟ್ ಮಾರಾಟ ಆರಂಭವಾಗಿ 1958ರ ಜನವರಿ 10ರಂದು ಲಾಟರಿ ಡ್ರಾ ಮಾಡಲಾಗಿತ್ತು. ತಲಾ 5 ಪೌಂಡ್‌ಗೆ ಒಂದರಂತೆ ಒಟ್ಟು ಒಂದು ಲಕ್ಷ ಟಿಕೆಟ್‌ಗಳನ್ನು ಮಾರಾಟ ಮಾಡಲಾಗಿತ್ತು. ಈ ಟಿಕೆಟ್‌ಗಳು 26 ದಿನಗಳಲ್ಲಿ ಖರ್ಚಾಗಿದ್ದವು. ಲಾಟರಿ ಗೆದ್ದವರು ಪಡೆದುಕೊಂಡ ಮೊತ್ತ ಒಂದು ಲಕ್ಷ ಪೌಂಡ್! ಈ ಮೊತ್ತ ಇಂದಿನ 30 ಲಕ್ಷ ಆಸ್ಟ್ರೇಲಿಯನ್ ಡಾಲರ್‌ಗಳಿಗೂ ಹೆಚ್ಚು.

ಪ್ರತಿ ವರ್ಷವೂ ಹಲವು ಲಾಟರಿ ಯೋಜನೆಗಳಿರುತ್ತಿದ್ದವು. ಕಡೆಯ ಲಾಟರಿಯನ್ನು ಡ್ರಾ ಮಾಡಿದ್ದು 1986ರ ಸೆಪ್ಟೆಂಬರ್‌ನಲ್ಲಿ. ಅಷ್ಟರಲ್ಲಾಗಲೇ ಕಟ್ಟಡ ನಿರ್ಮಾಣ ಮುಗಿದಿತ್ತು.



1964, ಆಗಸ್ಟ್ 18ರ 'ದಿ ಸಿಡ್ನಿ ಮಾರ್ನಿಂಗ್ ಹೆರಾಲ್ಡ್' ಪತ್ರಿಕೆಯಲ್ಲಿ ಪ್ರಕಟವಾದ ಲಾಟರಿ ವಿಜೇತರ ಚಿತ್ರ

ಪೂರ್ಣಗೊಂಡ ಕಟ್ಟಡವನ್ನು ನೋಡಲು ಉಟ್ಜಾನ್ ಅವರು ಮರಳಿ ಆಸ್ಟ್ರೇಲಿಯಾಗೆ ಬರಲೇ ಇಲ್ಲ. ನಂತರ, ಆಸ್ಟ್ರೇಲಿಯಾದ ವಾಸ್ತುಶಿಲ್ಪಿ ಪೀಟರ್ ಹಾಲ್ ಅವರು ಸರ್ಕಾರದಿಂದ ನೇಮಕಗೊಂಡ ವಾಸ್ತುಶಿಲ್ಪಿಗಳಾದ ಲಿಯೊನೆಲ್ ಟೊಡ್ ಹಾಗೂ ಡೇವಿಡ್ ಲಿಟ್ಲ್ ಮೋರ್ ಜೊತೆಗೆ ಈ ಯೋಜನೆಯನ್ನಂತೂ ಪೂರ್ಣಗೊಳಿಸಿದರು. ಈ ಯೋಜನೆಯ ಎಂಜಿನಿಯರ್‌ಗಳಾಗಿದ್ದ 'ಓವ್ ಅರೂಪ್ ಅಂಡ್ ಪಾರ್ಟ್‌ನರ್ಸ್', ಕೊನೆಯವರೆಗೂ ಜೊತೆಗಿದ್ದರು. 1973ರ ಅಕ್ಟೋಬರ್ 20ರಂದು 'ಒಪೆರಾ ಹೌಸ್' ಉದ್ಘಾಟನೆಯಾಗುವಾಗ ಯೋಜಿಸಿದ್ದಕ್ಕಿಂತ ಆರು ವರ್ಷ ತಡವಾಗಿತ್ತು. ಮೂಲ ಅಂದಾಜಿಗಿಂತ ಹತ್ತು ಪಟ್ಟಿಗೂ ಹೆಚ್ಚು ಹಣ ವ್ಯಯವಾಗಿತ್ತು.

## ಬೆನ್ನೆಲಾಂಗ್ ಪಾಯಿಂಟ್

1955ರಲ್ಲಿ ಬೆನ್ನೆಲಾಂಗ್ ಪಾಯಿಂಟ್‌ನಲ್ಲಿ ಒಪೆರಾ ಹೌಸ್ ನಿರ್ಮಾಣವಾಗುತ್ತದೆಂದು ಘೋಷಿಸಲಾಯಿತು. ವಾಸ್ತವವಾಗಿ, 'ವೂಲ್ಲಾರಾವರೆ ಬೆನ್ನೆಲಾಂಗ್' ಎಂಬುದು ಮೂಲನಿವಾಸಿಗಳ ಇಯೊರಾ ರಾಷ್ಟ್ರದ (ಅಬಾರಿಜಿನಲ್ ಇಯೊರಾ ನೇಷನ್) ಬುಡಕಟ್ಟಿನ ವ್ಯಕ್ತಿಯ ಹೆಸರು. ಈತ, ಈ ಭೂಭಾಗದ ಪಾರಂಪರಿಕ ಮಾಲೀಕರಲ್ಲಿ ಒಬ್ಬ. ಈತನ ಹೆಸರನ್ನೇ ಈ ಪ್ರದೇಶಕ್ಕೆ ಇಡಲಾಗಿದೆ. ಬೆನ್ನೆಲಾಂಗ್ ಹಾಗೂ ಆತನ ಪತ್ನಿ ಬರಾಂಗರೂ, ಈಗ ಸಿಡ್ನಿಯಲ್ಲಿನ ಸರ್ಕ್ಯುಲರ್ ಕೀ (Circular Quay) ಇರುವ ತೀರ ಪ್ರದೇಶಕ್ಕೆ ಬಂದು ನೆಲೆಸಿದವರು.

1788ರಲ್ಲಿ ಯೂರೋಪಿಯನ್ನರ ಮೊದಲ ನೌಕೆ ಸಿಡ್ನಿಗೆ ಬಂದಿಳಿದಾಗ ಬರಾಂಗರೂ ಹಾಗೂ ಬೆನ್ನೆಲಾಂಗ್ ದಂಪತಿ ಸಿಡ್ನಿಯಲ್ಲಿ ಮುಖ್ಯರಾದವರಾಗಿದ್ದರು. ಯೂರೋಪಿಯನ್ನರ ಜೊತೆ ಕುಳಿತು ತಿನ್ನಲು, ಕುಡಿಯಲು ಗೌರವಾನ್ವಿತ ಅಬಾರಿಜಿನಲ್ ನೇತಾರರಾಗಿ ಅವರಿಗೆ ಆಗಾಗ್ಗೆ ಆಹ್ವಾನ ಇರುತ್ತಿತ್ತು. ಸ್ಥಳೀಯ ಜನರ ಭಾಷೆ ಹಾಗೂ ಸಂಪ್ರದಾಯಗಳನ್ನು ಚೆನ್ನಾಗಿ ಅರ್ಥ